ಗೋಲ್ಡ್ ಲೋನ್ ಮತ್ತು ಜ್ಯುವೆಲ್ಲರಿ ಅಂಗಡಿಗಳಿಗಾಗಿ ಸಾಫ್ಟ್‌ವೇರ್


# ಗೋಲ್ಡ್ ಲೋನ್ ಅಂಗಡಿಗೆ ಬೇಕಾದ್ದೆಲ್ಲಾ ಒಂದೇ ಸಾಫ್ಟ್‌ವೇರ್‌ನಲ್ಲಿ.

ಲೋನ್, ನಿಮ್ಮದೇ ರೀತಿಯಲ್ಲಿ ಬಡ್ಡಿ ಲೆಕ್ಕ, ಗಿರವಿ ಬಿಲ್, ವಾಟ್ಸ್‌ಆ್ಯಪ್‌ನಲ್ಲಿ ರಸೀದಿ ಮತ್ತು ರಿಮೈಂಡರ್, ಕಾನೂನು ಕೇಳುವ ರಿಜಿಸ್ಟರ್‌ಗಳು — ಜ್ಯುವೆಲ್ಲರಿ ಮಾರುವವರಿಗೆ GST ಬಿಲ್ಲಿಂಗ್ ಕೌಂಟರ್ ಕೂಡ.

**₹499/ ತಿಂಗಳು**
ಪ್ಲಾನ್ ತಿಂಗಳಿಗೆ ₹499 + GST ಇಂದ ಶುರು. ಸೆಟಪ್ ಮತ್ತು ಟ್ರೈನಿಂಗ್ ಫ್ರೀ.

**30 ದಿನ ಫ್ರೀ**
ಒಂದು ತಿಂಗಳು ಎಲ್ಲಾ ಸೌಲಭ್ಯ ಬಳಸಿ ನೋಡಿ. ಕಾರ್ಡ್ ಬೇಡ.

**ಯಾವ ಫೋನ್‌ನಲ್ಲಾದರೂ**
Chrome ನಂತಹ ಬ್ರೌಸರ್‌ನಲ್ಲಿ ಕೆಲಸ ಮಾಡುತ್ತೆ. ಏನೂ ಇನ್‌ಸ್ಟಾಲ್ ಮಾಡಬೇಕಿಲ್ಲ.




ನಿಮ್ಮ ಎಲ್ಲಾ ಲೋನ್‌ಗಳು, ನಿಮ್ಮ ಜೇಬಿನ ಫೋನ್‌ನಲ್ಲಿ

**ಯಾರಿಗಾಗಿ**
ಗೋಲ್ಡ್ ಲೋನ್ ಮತ್ತು ಗಿರವಿ ವ್ಯವಹಾರ ಮಾಡುವ ಅಂಗಡಿಗಳು, ಹಾಗೂ ಗಿರವಿ ಮೇಲೆ ಹಣ ಕೊಡುವ ಜ್ಯುವೆಲ್ಲರ್‌ಗಳು

**ಯಾವುದರಲ್ಲಿ ಕೆಲಸ ಮಾಡುತ್ತೆ**
ಯಾವ ಫೋನ್, ಟ್ಯಾಬ್ಲೆಟ್ ಅಥವಾ ಕಂಪ್ಯೂಟರ್ ಆದರೂ ಸರಿ — ಸಾಮಾನ್ಯ ಇಂಟರ್ನೆಟ್ ಸಾಕು

**ನಿಮ್ಮದೇ ವಿಳಾಸ**
yourfirm.goldkhata.com — ನಿಮ್ಮದೇ ಪ್ರತ್ಯೇಕ ಸಿಸ್ಟಮ್ ಮತ್ತು ಡೇಟಾ

**ಭಾಷೆಗಳು**
ಸ್ಕ್ರೀನ್ ಇಂಗ್ಲಿಷ್‌ನಲ್ಲಿ; ಕಾಗದ ಪತ್ರ ಮತ್ತು ವಾಟ್ಸ್‌ಆ್ಯಪ್ ಮೆಸೇಜ್ ಇಂಗ್ಲಿಷ್, ಕನ್ನಡ ಅಥವಾ ತಮಿಳಿನಲ್ಲಿ

ಲೈವ್ ಡೆಮೊ, ಎಲ್ಲರಿಗೂ ಓಪನ್: **demo.goldkhata.com** — ಲಾಗಿನ್ **demo** / **demo1234**. ಚಾಲ್ತಿಯಲ್ಲಿರುವ ಲೋನ್‌ಗಳಿರುವ ಒಂದು ಮಾದರಿ ಅಂಗಡಿ; ಪ್ರತಿ ರಾತ್ರಿ ಇದರ ಡೇಟಾ ತಾನಾಗೇ ಮೊದಲಿನಂತೆ ಆಗುತ್ತೆ.

ಅಂಗಡಿಯವರು GOLDKHATA ಯಾಕೆ ಆರಿಸುತ್ತಾರೆ

# GoldKhata ದಲ್ಲಿ ಬೇರೆ ಏನಿದೆ

### ನಿಮ್ಮ ವ್ಯವಹಾರಕ್ಕೆ ತಕ್ಕಂತೆ ಹೊಂದಿಕೊಳ್ಳುತ್ತೆ

ಬಡ್ಡಿ ಹಾಕುವ ನಿಮ್ಮ ರೀತಿ, ಮೊದಲ ತಿಂಗಳ ನಿಮ್ಮ ನಿಯಮ, ಸರಳ ಬಡ್ಡಿ ಆಗಲಿ ಚಕ್ರಬಡ್ಡಿ ಆಗಲಿ, ನಿಮ್ಮ ಕಾಗದ ಪತ್ರ ಮತ್ತು ಷರತ್ತುಗಳು — ಒಂದೇ ಸಲ ಸೆಟ್ ಮಾಡಿ. ಸೆಟ್ಟಿಂಗ್ ಸಾಲದಿದ್ದರೆ, ನಿಮಗಾಗಿ ನಾವೇ ನಿಯಮ ಮಾಡಿಕೊಡುತ್ತೇವೆ.

### ವಾಟ್ಸ್ಆ್ಯಪ್ ನಿಮ್ಮದೇ ನಂಬರ್‌ನಿಂದ

ರಸೀದಿ, ರಿಮೈಂಡರ್ ಮತ್ತು ರೇಟ್ ಕಾರ್ಡ್ ನಿಮ್ಮ ಗ್ರಾಹಕರಿಗೆ ಗೊತ್ತಿರುವ ನಂಬರ್‌ನಿಂದಲೇ ಹೋಗುತ್ತೆ. ಮೆಸೇಜ್‌ಗಾಗಿ ವಾಲೆಟ್ ರೀಚಾರ್ಜ್ ಮಾಡಬೇಕಿಲ್ಲ.

### ಬೆಲೆ ಓಪನ್ ಆಗಿ ಬರೆದಿದೆ

ತಿಂಗಳಿಗೆ ₹499 ರಿಂದ ₹999 + GST. ಪ್ರತಿ ಲೋನ್‌ಗೆ ಫೀಸ್ ಇಲ್ಲ, ವರ್ಷದ ಮೇಂಟೆನೆನ್ಸ್ ಚಾರ್ಜ್ ಇಲ್ಲ. ಈ ವ್ಯವಹಾರದಲ್ಲಿ ಹೆಚ್ಚಿನ ಕಂಪನಿಗಳು ಬೆಲೆಯನ್ನೇ ಹೇಳುವುದಿಲ್ಲ.

### ನಿಮ್ಮ ಡೇಟಾ ನಿಮ್ಮದೇ

ನಿಮ್ಮ ಡೇಟಾ ಪ್ರತ್ಯೇಕವಾಗಿ ಇಡಲಾಗುತ್ತೆ, ಬೇಕೆಂದಾಗ ಒಂದೇ ಕ್ಲಿಕ್‌ನಲ್ಲಿ ಪೂರ್ತಿ ಲೆಕ್ಕ Excel ನಲ್ಲಿ, ಪ್ರತಿ ರಾತ್ರಿ ಸುರಕ್ಷಿತ ಬ್ಯಾಕಪ್. ಹಣ ಕಟ್ಟುವುದು ನಿಲ್ಲಿಸಿದರೂ ಎಲ್ಲವನ್ನೂ ನೋಡಬಹುದು.

### ಅಂಗಡಿಯ ಎರಡೂ ಕೆಲಸ ಒಂದೇ ಸಾಫ್ಟ್‌ವೇರ್‌ನಲ್ಲಿ

ಗೋಲ್ಡ್ ಲೋನ್, ಜ್ಯುವೆಲ್ಲರಿ ಕೌಂಟರ್, ಕ್ಯಾಶ್ ಬುಕ್, GST ರಿಟರ್ನ್ ಮತ್ತು ನಿಮ್ಮ CA ಗೆ Tally ಫೈಲ್. ಒಂದೇ ಲಾಗಿನ್, ಒಂದೇ ಗ್ರಾಹಕರ ಲಿಸ್ಟ್.

### ನಿಮ್ಮ ಹತ್ತಿರ ಈಗ ಇರುವ ಫೋನ್‌ನಲ್ಲೇ ಕೆಲಸ ಮಾಡುತ್ತೆ

ಏನೂ ಇನ್‌ಸ್ಟಾಲ್ ಮಾಡಬೇಕಿಲ್ಲ. ವಾಟ್ಸ್ಆ್ಯಪ್‌ಗೆ ಬೇಕಾದಷ್ಟು ಇಂಟರ್ನೆಟ್ ಸಾಕು — ಲೈನ್ ಹೋದರೂ ಬಿಲ್ಲಿಂಗ್ ನಡೆಯುತ್ತಲೇ ಇರುತ್ತೆ.

### ಕಾನೂನು ಕೇಳುವ ಕಾಗದ ಪತ್ರ ಎಲ್ಲಾ ಇದರಲ್ಲೇ ಇದೆ

ಗಿರವಿ ಬಿಲ್, ಗೋಲ್ಡ್ ಲೋನ್ ರಿಜಿಸ್ಟರ್, ಡೆಲಿವರಿ ರಿಜಿಸ್ಟರ್, ಪೋಸ್ಟ್ ಟ್ರ್ಯಾಕಿಂಗ್ ಇರುವ ನೋಟಿಸ್ ಮತ್ತು ಹರಾಜು — ಎಲ್ಲಾ ರೆಡಿಯಾಗಿ ಪ್ರಿಂಟ್ ಆಗಿ ಸಿಗುತ್ತೆ.

### ಮಾಲೀಕರು ಎಲ್ಲಿಂದ ಬೇಕಾದರೂ ಎಲ್ಲಾ ನೋಡಬಹುದು

ಪ್ರತಿ ಸಂಜೆ ನಿಮ್ಮ ವಾಟ್ಸ್ಆ್ಯಪ್‌ಗೆ ದಿನದ ರಿಪೋರ್ಟ್, ಚಿನ್ನದ ರೇಟ್ ಇಳಿದಾಗ ರಿಸ್ಕ್ ಇರುವ ಲೋನ್‌ಗಳು, ಬಾಕಿ ನಿಂತ ಬಡ್ಡಿ, ಮಲಗಿರುವ ಲೋನ್‌ಗಳು.

**“ನಮ್ಮನ್ನು ನಂಬಬೇಡಿ. ಪರೀಕ್ಷೆ ಮಾಡಿ ನೋಡಿ.”**

ನಿಮ್ಮ ರಿಜಿಸ್ಟರ್‌ನ ಒಂದು ಪುಟವನ್ನು ವಾಟ್ಸ್ಆ್ಯಪ್‌ನಲ್ಲಿ ಕಳಿಸಿ. ಅದೇ ಲೋನ್‌ಗಳನ್ನು ಸಾಫ್ಟ್‌ವೇರ್‌ನಲ್ಲಿ ಹಾಕಿ ನಮ್ಮ ಲೆಕ್ಕ ತೋರಿಸುತ್ತೇವೆ. ನಮ್ಮ ಬಡ್ಡಿ ನಿಮ್ಮ ಬಡ್ಡಿಗಿಂತ ಒಂದು ರೂಪಾಯಿ ಬೇರೆ ಬಂದರೂ, ತಗೊಳ್ಳಬೇಡಿ.

ಗೋಲ್ಡ್ ಲೋನ್

# ಒಂದು ಲೋನ್, ಶುರುವಿನಿಂದ ಕೊನೆಯವರೆಗೆ

**ಚಿನ್ನ ಗಿರವಿ ಇಟ್ಟರು**
ಗ್ರಾಹಕ, ಒಡವೆ, ತೂಕ, ಶುದ್ಧತೆ

→

**ಗಿರವಿ ಬಿಲ್ ಪ್ರಿಂಟ್ ಆಯ್ತು**
ನಿಮ್ಮ ಅಂಗಡಿಯ ಹೆಸರಿನೊಂದಿಗೆ

→

**ಬಡ್ಡಿ ಬಂತು**
ಕ್ಯಾಶ್ ಅಥವಾ UPI; ರಸೀದಿ ವಾಟ್ಸ್ಆ್ಯಪ್‌ನಲ್ಲಿ

→

**ಟಾಪ್-ಅಪ್, ಅಥವಾ ಕೆಲವು ಒಡವೆ ವಾಪಸ್**
ಲೋನ್ ಮುಂದುವರಿಯುತ್ತೆ


→

**ಲೋನ್ ಕ್ಲೋಸ್**
ಒಡವೆ ವಾಪಸ್ ಕೊಟ್ಟರು; ವಾಪಸ್ ಕೊಡುವಾಗ ಫೋಟೋ ತೆಗೆದರು

**ಸಮಯಕ್ಕೆ ಹಣ ಬರಲಿಲ್ಲವೇ?**
ಮೊದಲು ಕೊನೆಯ ನೋಟಿಸ್, ಆಮೇಲೆ ಹರಾಜು ನೋಟಿಸ್ — ಸಮಯಕ್ಕೆ ಸರಿಯಾಗಿ

→

**ಹರಾಜು**
ಮಾರಾಟದ ಎಂಟ್ರಿ; ಉಳಿದ ಹಣ ಗ್ರಾಹಕರಿಗೆ ವಾಪಸ್





ಲೋನ್ ಪುಟ: ಪ್ರತಿ ಪೇಮೆಂಟ್, ಟಾಪ್-ಅಪ್, ನೋಟಿಸ್ — ಯಾರು ಮಾಡಿದ್ರು, ಯಾವಾಗ, ಎಲ್ಲಾ ಬರೆದಿರುತ್ತೆ

- **ಸುಮಾರು ಒಂದು ನಿಮಿಷದಲ್ಲಿ ಹೊಸ ಲೋನ್** — ಗಿರವಿ ಬಿಲ್ ತಕ್ಷಣ ಪ್ರಿಂಟ್ ಆಗುತ್ತೆ
- **ಬಡ್ಡಿ ನಿಮ್ಮದೇ ರೀತಿಯಲ್ಲಿ** — ಸರಳ ಬಡ್ಡಿ ಅಥವಾ ಚಕ್ರಬಡ್ಡಿ, ಮೊದಲ ತಿಂಗಳ ನಿಮ್ಮ ನಿಯಮ — ಒಂದೇ ಸಲ ಸೆಟ್ ಮಾಡಿ
- **ಬಡ್ಡಿ ಕ್ಯಾಲ್ಕುಲೇಟರ್** — ಯಾವ ಲೋನ್ ಆದರೂ, ಯಾವ ದಿನಾಂಕ ಆದರೂ, ಕೆಲವೇ ಸೆಕೆಂಡ್‌ನಲ್ಲಿ
- **ಚಿನ್ನ ಮತ್ತು ಬೆಳ್ಳಿ** — ಬೆಳ್ಳಿ ಮೇಲೂ ಲೋನ್, ಬೆಳ್ಳಿಯ ಶುದ್ಧತೆಯೊಂದಿಗೆ
- **ರಿನ್ಯೂವಲ್, ಕೆಲವು ಒಡವೆ ವಾಪಸ್ ಕೊಡುವುದು, ಹಲವು ಲೋನ್ ಒಟ್ಟಿಗೆ ಕ್ಲೋಸ್ ಮಾಡುವುದು** — ಪ್ರತಿ ಕೆಲಸ ಒಂದೇ ಹೆಜ್ಜೆಯಲ್ಲಿ
- **ಹಿಂದಿನ ದಿನಾಂಕದ ಎಂಟ್ರಿ** — ಹಳೆಯ ದಿನಾಂಕದ ಎಂಟ್ರಿ ಎಲ್ಲಾ ಕಡೆ ಅದೇ ದಿನಾಂಕದಲ್ಲಿ ಕಾಣುತ್ತೆ

ಪೇಮೆಂಟ್ ಮತ್ತು ವಾಟ್ಸ್ಆ್ಯಪ್

# ಹಣ ಬಂತು, ಗ್ರಾಹಕರಿಗೆ ತಕ್ಷಣ ಗೊತ್ತಾಯ್ತು

| | | |
|---|---|---|
| **ಕೌಂಟರ್‌ನಲ್ಲಿ ಪೇಮೆಂಟ್ ಎಂಟ್ರಿ ಆಯ್ತು** | → | ಗ್ರಾಹಕರ ವಾಟ್ಸ್ಆ್ಯಪ್‌ಗೆ ರಸೀದಿ |
| **ಬಡ್ಡಿ ಕಟ್ಟುವ ದಿನ ಹತ್ತಿರ ಬರ್ತಿದೆ** | → | ರಿಮೈಂಡರ್ ತಾನಾಗೇ ಹೋಗುತ್ತೆ — ಫೋನ್ ಮಾಡಬೇಕು ಅಂತ ಯಾರೂ ನೆನಪಿಟ್ಟುಕೊಳ್ಳಬೇಕಿಲ್ಲ |
| **ಲೋನ್ ಅವಧಿ ಮುಗಿಯುವ ಹಂತದಲ್ಲಿದೆ** | → | ಅವಧಿ ಮುಗಿಯುವ ಮೊದಲೇ ಅಲರ್ಟ್ |
| **ಪ್ರತಿ ಶುಕ್ರವಾರ ಬೆಳಿಗ್ಗೆ** | → | ಪ್ರತಿ ಗ್ರಾಹಕರಿಗೂ ಇವತ್ತಿನ ಚಿನ್ನದ ರೇಟ್ ಕಾರ್ಡ್ |
| **ಗ್ರಾಹಕರು ಉತ್ತರ ಕೊಡುತ್ತಾರೆ ಅಥವಾ ಫೋಟೋ ಕಳಿಸುತ್ತಾರೆ** | → | ನೇರವಾಗಿ ನಿಮ್ಮ ಇನ್‌ಬಾಕ್ಸ್‌ಗೆ, ಸರಿಯಾದ ಗ್ರಾಹಕರ ಹೆಸರಿನಲ್ಲಿ |
| **ಗ್ರಾಹಕರು BAL ಅಂತ ಬರೆದು ಕಳಿಸುತ್ತಾರೆ** | → | ಅವರ ಬಾಕಿ, ಯಾವ ಸಮಯದಲ್ಲಾದರೂ |





ಪ್ರತಿ ಪೇಮೆಂಟ್, ಅದರ ರಸೀದಿ ನಂಬರ್, ಹಣ ಹೇಗೆ ಬಂತು — ಕ್ಯಾಶ್ ಅಥವಾ UPI

- **ಕ್ಯಾಶ್, UPI, ಬ್ಯಾಂಕ್ ಅಥವಾ ಚೆಕ್** — ಯಾವ ರೀತಿಯಲ್ಲಿ ಬಂದರೂ ರಸೀದಿ
- **ಸರಿಯಾಗಿ ಅಷ್ಟೇ ಮೊತ್ತದ UPI QR** — ತಪ್ಪು ಮೊತ್ತ ಬರುವ ತೊಂದರೆ ಇಲ್ಲ
- **ಒಂದೇ ಪೇಮೆಂಟ್‌ನಲ್ಲಿ ಸ್ವಲ್ಪ ಕ್ಯಾಶ್, ಸ್ವಲ್ಪ UPI** — ಗಲ್ಲಾಗೆ ಕ್ಯಾಶ್ ಭಾಗ ಮಾತ್ರ ಸೇರುತ್ತೆ
- **ಪೇಮೆಂಟ್ ಲಿಂಕ್** — ಬಾಕಿ ಹಣ ತರಿಸಿಕೊಳ್ಳಲು
- **ಸ್ವಾಗತ ಮೆಸೇಜ್ ಮತ್ತು ಬಾಕಿ ಮೆಸೇಜ್** — ಒಳ್ಳೆಯ ಮಾತಿನಲ್ಲಿ, ತಾನಾಗೇ ಹೋಗುತ್ತೆ
- **ಗ್ರಾಹಕರು STOP ಕಳಿಸಿದರೆ ಮೆಸೇಜ್ ನಿಲ್ಲುತ್ತೆ** — START ಕಳಿಸಿದರೆ ಮತ್ತೆ ಶುರು

> ನಿಮ್ಮದೇ Meta ವಾಟ್ಸ್ಆ್ಯಪ್ ಬಿಸಿನೆಸ್ ಅಕೌಂಟ್, ಅದನ್ನು ನಾವು ಒಂದೇ ಸಲದ ₹1,999 ಕ್ಕೆ ಜೋಡಿಸಿಕೊಡುತ್ತೇವೆ (Pro ಮತ್ತು Advanced). ಪ್ರತಿ ಮೆಸೇಜ್‌ಗೆ Meta ಚಾರ್ಜ್ — ಕೆಲವು ಪೈಸೆ — ನೇರವಾಗಿ ನಿಮ್ಮದೇ ಅಕೌಂಟ್‌ಗೆ ಬೀಳುತ್ತೆ, Meta ಎಷ್ಟು ತಗೊಳ್ಳುತ್ತೋ ಅಷ್ಟೇ.

ಕಾಗದ ಪತ್ರ, ರಿಜಿಸ್ಟರ್ ಮತ್ತು ನೋಟಿಸ್

# ರೆಡಿಯಾಗಿ ಪ್ರಿಂಟ್ ಆಗಿ ಬರುತ್ತೆ, ನಿಮ್ಮ ಅಂಗಡಿಯ ಹೆಸರಿನೊಂದಿಗೆ



Trusted Gold Loan Services
12, Market Road, Mysuru, Karnataka, 570001 · +91 9000000000 · Licence No: GL/2026/001

**GOLD PLEDGE RECEIPT** Receipt No: **B1525** 28/06/2026 10:35

**CUSTOMER**

| | |
|---|---|
| A/C NO | CUST-0231 |
| NAME | **D Kumar** |
| SON | Devappa |
| ADDRESS | MG Road, Mysuru, Karnataka, 570001 |
| PHONE | 9876543210 |

**LOAN**

| | |
|---|---|
| DATE OF PLEDGE | 28/06/2026 10:35 |
| VALIDITY | **28/06/2026 to 28/12/2026** |
| INTEREST RATE | **Fourteen Percent** |
| SERVICE CHARGE | APPLIED |
| GOLD RATE (22K) | Rs. 9,100.00 |

LOAN AMOUNT
**Rs. 23,000.00 /-**
*Rupees Twenty Three Thousand Only*

**PLEDGED ORNAMENTS**

| # | TAG NO. | ORNAMENT DESCRIPTION | QTY | GROSS (g) | STONE (g) | NET (g) | PURITY | PURE GOLD (g) |
|---|---|---|---|---|---|---|---|---|
| 1 | CB/2026/B1525 | CHAIN — 22K gold chain | 1 | 2.700 | 0.000 | 2.700 | 91.6% | **2.473** |

| TOTAL ITEMS | TOTAL WEIGHT | PURE GOLD | LOAN ELIGIBLE |
|---|---|---|---|
| 1 | 2.700 g | 2.473 g | Rs. 24,500.00 |

Vault: Main Safe A · Packet: P-118

For Demo Gold Finance — Authorised Signatory
Customer Signature

System-generated pledge receipt · Demo Gold Finance · +91 9000000000
Page 1 of 2

ಗಿರವಿ ಬಿಲ್ — ನಿಮ್ಮ ಅಂಗಡಿಯ ಹೆಸರು, ವಿಳಾಸ ಮತ್ತು ಉಳಿದ ವಿವರಗಳೊಂದಿಗೆ



12, Market Road · Ph: 9000000000

TO ಇವರಿಗೆ,
**D Kumar**
Son: Devappa
Market Road
Market Road, Karnataka - 570001
Mob: 9000000001
Ref. No: B1525

**FINAL DEMAND NOTICE**
ಅಂತಿಮ ಬೇಡಿಕೆ ಸೂಚನೆ
Notice No: N-2026-001
Date: 24 July 2026
**Ref: Loan No. B1525**

| Loan No. | Principal | Gold (g) | Notice Charge | Total Due |
|---|---|---|---|---|
| B1525 | Rs. 23,000.00 | 2.700 | Rs. 300.00 | **Rs. 23,000.00 + interest + notice charge** |

Dear **D Kumar**,

This is a formal reminder that your Gold Loan No. **B1525**, taken on **12/07/2025** for **Rs. 23,000.00**, has completed its full term of twelve (12) months and is now due for closure.

Please settle the total due shown above — principal of **Rs. 23,000.00** with interest and the notice charge — on or before **10/08/2026**.

If the dues are not settled by the deadline, auction proceedings of the pledged ornaments will begin as per the terms of the pledge, without any further intimation.

To renew or close the loan, or for any clarification, kindly visit our office with this notice.

As per Rule 20 of the Pawnbrokers Act, the cost of this notice is payable by you.

ಸಾಲದ ಸಂಖ್ಯೆ: **B1525** ಸಾಲದ ದಿನಾಂಕ: **12/07/2025** ಮೂಲ ಮೊತ್ತ: **Rs. 23,000.00**

ಮಾನ್ಯರೇ,
ಮೇಲಿನ ಕೋಷ್ಟಕದಲ್ಲಿ ವಿವರಿಸಲಾದ ಚಿನ್ನದ ಸಾಲವು ಹನ್ನೆರಡು ತಿಂಗಳುಗಳ ಪೂರ್ಣ ಅವಧಿಯನ್ನು ಪೂರ್ಣಗೊಳಿಸಿದೆ ಮತ್ತು ಇದೀಗ ಮುಚ್ಚಲು ಬಾಕಿಯಿದೆ ಎಂಬುದನ್ನು ಇದು ಔಪಚಾರಿಕ ಜ್ಞಾಪನೆಯಾಗಿದೆ.
ದಯವಿಟ್ಟು ಮೇಲಿನ ಕೋಷ್ಟಕದಲ್ಲಿ ತೋರಿಸಿರುವ ಒಟ್ಟು ಬಾಕಿ ಮೊತ್ತವನ್ನು - ಅಸಲು, ಬಡ್ಡಿ ಮತ್ತು ನೋಟೀಸ್ ಶುಲ್ಕವನ್ನು - ಕೆಳಗೆ ಮುದ್ರಿಸಿದ ಗಡುವಿನ ದಿನಾಂಕದಂದು ಅಥವಾ ಮೊದಲು ಇತ್ಯರ್ಥಪಡಿಸಿ.
ಗಡುವಿನೊಳಗೆ ಬಾಕಿಯನ್ನು ಇತ್ಯರ್ಥಪಡಿಸದಿದ್ದರೆ, ಯಾವುದೇ ಸೂಚನೆಯಿಲ್ಲದೆ ಒತ್ತೆಯ ಆಭರಣಗಳ ಹರಾಜು ಪ್ರಕ್ರಿಯೆಗಳು ಪ್ರಾರಂಭವಾಗುತ್ತವೆ.
ಪಾವತಿಸಬೇಕಾದ ಬಡ್ಡಿಯನ್ನು ತಿಳಿಯಲು ಅಥವಾ ಸಾಲವನ್ನು ನವೀಕರಿಸಲು ಅಥವಾ ಮುಚ್ಚಲು, ದಯವಿಟ್ಟು ಈ ಸೂಚನೆಯೊಂದಿಗೆ ನಮ್ಮ ಕಚೇರಿಗೆ ಭೇಟಿ ನೀಡಿ.
ಗಿರವಿದಾರರ ಕಾಯಿದೆಯ ನಿಯಮ 20 ರ ಪ್ರಕಾರ, ಈ ನೋಟೀಸ್‌ನ ವೆಚ್ಚವನ್ನು ನೀವು ಪಾವತಿಸಬೇಕಾಗುತ್ತದೆ.

**Deadline / ಕೊನೆಯ ದಿನಾಂಕ: 10 August 2026** **Total Due: Rs. 23,000.00 + interest + notice charge**

Date: 24 July 2026
**For Demo Gold Finance**
Authorised Signatory

Sent via Speed Post / Registered Post. This is a system-generated demand notice.
Loan ref: B1525 · Generated by Demo Gold Finance GLMS

ಕೊನೆಯ ನೋಟಿಸ್ ಇಂಗ್ಲಿಷ್ ಮತ್ತು ಕನ್ನಡದಲ್ಲಿ; ಹರಾಜು ನೋಟಿಸ್ ಕೂಡ ಇದೇ ರೀತಿ ಬರುತ್ತೆ

- **ಗಿರವಿ ಬಿಲ್ ಮತ್ತು ಅಗ್ರಿಮೆಂಟ್** — ಲೋನ್ ಸೇವ್ ಆದ ತಕ್ಷಣ
- **ಡೆಲಿವರಿ ರಿಜಿಸ್ಟರ್** — ಒಡವೆ ವಾಪಸ್ ಕೊಟ್ಟ ದಾಖಲೆ, ಸಾಲಾಗಿ ನಂಬರ್‌ನೊಂದಿಗೆ
- **ಹರಾಜು ಕಮಾಂಡ್ ಸೆಂಟರ್** — ಬಾಕಿ ಇರುವ ಲೋನ್‌ಗಳ ಲಿಸ್ಟ್, ಒಟ್ಟಿಗೆ ಹಲವು ನೋಟಿಸ್, ಹರಾಜಿನ ಫಲಿತಾಂಶ
- **ಇಂಗ್ಲಿಷ್, ಕನ್ನಡ ಅಥವಾ ತಮಿಳು** — ಗ್ರಾಹಕರಿಗೆ ತಕ್ಕಂತೆ, ಅಥವಾ ಪ್ರತಿ ಬಿಲ್‌ಗೂ ಬೇರೆ
- **ಗೋಲ್ಡ್ ಲೋನ್ ರಿಜಿಸ್ಟರ್** — ಕಾನೂನು ಕೇಳುವ ಅದೇ ರಿಜಿಸ್ಟರ್, ಯಾವ ದಿನಾಂಕದಿಂದ ಯಾವ ದಿನಾಂಕದವರೆಗಾದರೂ
- **ನೋಟಿಸ್ ಸಮಯಕ್ಕೆ ಸರಿಯಾಗಿ** — ಕೊನೆಯ ನೋಟಿಸ್ ಮತ್ತು ಹರಾಜು ನೋಟಿಸ್, ಸ್ಪೀಡ್ ಪೋಸ್ಟ್ ನಂಬರ್‌ನೊಂದಿಗೆ
- **ನಿಮ್ಮದೇ ಷರತ್ತುಗಳು** — ನಿಮ್ಮ ಷರತ್ತುಗಳನ್ನು ಒಂದೇ ಸಲ ಬರೆಯಿರಿ; ಪ್ರತಿ ಕಾಗದದಲ್ಲೂ ಅದೇ ಪ್ರಿಂಟ್ ಆಗುತ್ತೆ
- **ಇಂಡೆಮ್ನಿಟಿ ಬಾಂಡ್, NOC, ಲೋನ್ ಕ್ಲೋಸ್ ಆದ ಕಾಗದ** — ಲೋನ್ ವಿವರದಿಂದ ತಾನಾಗೇ ತಯಾರಾಗುತ್ತೆ, ಮತ್ತೆ ಟೈಪ್ ಮಾಡಬೇಕಿಲ್ಲ

ಮಾಲೀಕರಿಗಾಗಿ

# ಒಂದೊಂದು ರೂಪಾಯಿಗೂ ಲೆಕ್ಕ, ದಿನದ ಕೊನೆಗೆ ಕ್ಯಾಶ್ ಎಣಿಸಿ ಕ್ಲೋಸ್

**ಹಣ ಬಂತು, ಹೋಯ್ತು**
ಕೊಟ್ಟ ಲೋನ್, ವಸೂಲಿ, ಬಿಲ್, ಖರ್ಚು

→


**ಕ್ಯಾಶ್ ಬುಕ್**
ತಾನಾಗೇ ತುಂಬುತ್ತೆ

→

**ದಿನದ ಲೆಕ್ಕ ಕ್ಲೋಸ್**
ಗಲ್ಲಾದ ಕ್ಯಾಶ್ ಎಣಿಸಿ; ಎಷ್ಟಿರಬೇಕು ಅಂತ ಸಾಫ್ಟ್‌ವೇರ್ ಹೇಳುತ್ತೆ

→

**ರಾತ್ರಿ 8:30 ಕ್ಕೆ**
ದಿನದ ರಿಪೋರ್ಟ್ ನಿಮ್ಮ ವಾಟ್ಸ್‌ಆ್ಯಪ್‌ಗೆ




ಡ್ಯಾಶ್‌ಬೋರ್ಡ್: ಇವತ್ತಿನ ಪೂರ್ತಿ ಸ್ಥಿತಿ ಒಂದೇ ನೋಟದಲ್ಲಿ


- **ವ್ಯವಹಾರ ಹೇಗೆ ನಡೀತಿದೆ** — ಹೋದ ತಿಂಗಳಿಗೆ ಹೋಲಿಸಿದರೆ ಈ ತಿಂಗಳು
- **ಸರಳ ಇಂಗ್ಲಿಷ್‌ನಲ್ಲಿ ಕೇಳಿ** — “how much did we collect last week”
- **ಮಾಲೀಕರ ಕಂಟ್ರೋಲ್ ರೂಮ್** — ರಿಸ್ಕ್ ಇರುವ ಲೋನ್, ಬಾಕಿ ನಿಂತ ಬಡ್ಡಿ, ಮಲಗಿರುವ ಲೋನ್
- **ಸ್ಟಾಫ್‌ಗೆ ಐದು ರೀತಿಯ ಲಾಗಿನ್** — ಮಾಲೀಕ, ಮ್ಯಾನೇಜರ್, ಕ್ಯಾಶಿಯರ್, ಒಡವೆ ಪರೀಕ್ಷೆ ಮಾಡುವವರು, ಆಡಿಟರ್
- **ಯಾರು ಏನು ಮಾಡಿದ್ರು** — ಪ್ರತಿ ಕೆಲಸದ ಜೊತೆ ಹೆಸರು ಮತ್ತು ಸಮಯ ಬರೆದಿರುತ್ತೆ
- **ಪ್ರೈವಸಿ ಲಾಕ್** — PIN ಹಾಕಿದರೆ ಮಾತ್ರ ಮೊತ್ತ ಕಾಣುತ್ತೆ
- **ಲಾಗಿನ್ ದಾಖಲೆ** — ಒಂದೇ ಬಟನ್‌ನಲ್ಲಿ ಎಲ್ಲಾ ಫೋನ್-ಕಂಪ್ಯೂಟರ್‌ನಿಂದ ಲಾಗ್‌ಔಟ್
- **ಬ್ರಾಂಚ್** — ಪ್ರತಿ ಬ್ರಾಂಚ್‌ಗೂ ಅದರದೇ ಕೌಂಟರ್; ನೀವು ಎಲ್ಲಾ ನೋಡಬಹುದು

ಜ್ಯುವೆಲ್ಲರಿ ಕೌಂಟರ್ ADVANCED PLAN

# ತೂಕ ಮಾಡಿ, ಸ್ಕ್ಯಾನ್ ಮಾಡಿ, ಬಿಲ್ ಮಾಡಿ

**ತಕ್ಕಡಿ (ವೇಯಿಂಗ್ ಮಷೀನ್)** ಕೌಂಟರ್ ಮೇಲೆ → **ಕೇಬಲ್‌ನಿಂದ ಕಂಪ್ಯೂಟರ್‌ಗೆ** → **Chrome ನಲ್ಲಿ GoldKhata** Weigh ಬಟನ್ ಒತ್ತಿ → **ತೂಕ ನೇರವಾಗಿ ಬಿಲ್‌ಗೆ** ಇವತ್ತಿನ ರೇಟ್‌ನೊಂದಿಗೆ → **ಟ್ಯಾಗ್ ಮತ್ತು GST ಬಿಲ್ ಪ್ರಿಂಟ್ ಆಗುತ್ತೆ**

**ಬಾರ್‌ಕೋಡ್ ಸ್ಕ್ಯಾನರ್** ಟ್ಯಾಗ್ ಸ್ಕ್ಯಾನ್ ಮಾಡಿ → **ತೂಕ, ಶುದ್ಧತೆ ಮತ್ತು ರೇಟ್ ತಾನಾಗೇ ಬಿಲ್‌ಗೆ** → **ಸರಿಯಾಗಿ ಅಷ್ಟೇ ಮೊತ್ತದ UPI QR**




ಬಿಲ್ಲಿಂಗ್ ಸ್ಕ್ರೀನ್

- **GST ನಿಮ್ಮದೇ ರೀತಿಯಲ್ಲಿ** — ಪೂರ್ತಿ ಬಿಲ್ ಮೇಲೆ 3%, ಅಥವಾ ಮೇಕಿಂಗ್ ಚಾರ್ಜ್ ಮೇಲೆ 5%
- **ಟ್ಯಾಗ್‌ನಿಂದ ಸ್ಟಾಕ್** — ಸ್ಕ್ಯಾನ್ ಮಾಡಿ ಎಣಿಕೆ; ಯಾವ ಪೀಸ್ ಎಲ್ಲಿದೆ ಅಂತ ಗೊತ್ತಿರುತ್ತೆ
- **ಹಳೆ ಚಿನ್ನ, ಕರಗಿಸುವುದು, ಅಕ್ಕಸಾಲಿಗರು, ಹಾಲ್‌ಮಾರ್ಕಿಂಗ್** — ಎಲ್ಲದರ ದಾಖಲೆ
- **ಸ್ಕೀಮ್, ಆರ್ಡರ್, ಲಾಯಲ್ಟಿ ಪಾಯಿಂಟ್** — ಪ್ರತಿ ಗ್ರಾಹಕರ ಹೆಸರಿನಲ್ಲಿ
- **ಅಕೌಂಟ್ಸ್ (ಲೆಕ್ಕ ಪತ್ರ) ತಾನಾಗೇ ತಯಾರಾಗುತ್ತೆ** — GSTR-1, GSTR-3B, ಮತ್ತು ನಿಮ್ಮ CA ಗೆ Tally ಫೈಲ್
- **ಯಾವ ಪ್ರಿಂಟರ್ ಆದರೂ, ಯಾವ ಪೇಪರ್ ಆದರೂ** — ಇಂಟರ್ನೆಟ್ ಇಲ್ಲದಿದ್ದರೂ ಕೆಲಸ ಮಾಡುತ್ತೆ

ನಿಮ್ಮ ಡೇಟಾ, ನಿಮ್ಮ ಫೋನ್-ಕಂಪ್ಯೂಟರ್

# ನಿಮ್ಮ ಹತ್ತಿರ ಇರುವುದರಲ್ಲೇ ಕೆಲಸ ಮಾಡುತ್ತೆ. ನಿಮ್ಮ ಡೇಟಾ ನಿಮ್ಮದೇ.

ಫೋನ್ | ಟ್ಯಾಬ್ಲೆಟ್ | ಕಂಪ್ಯೂಟರ್ | ಪ್ರಿಂಟರ್ | ತಕ್ಕಡಿ (ವೇಯಿಂಗ್ ಮಷೀನ್) | ಬಾರ್‌ಕೋಡ್ ಸ್ಕ್ಯಾನರ್

**ನಿಮ್ಮ ಅಂಗಡಿಯದೇ GoldKhata**
yourfirm.goldkhata.com

ನಿಮ್ಮ ಡೇಟಾ ಪ್ರತ್ಯೇಕ | ಸುರಕ್ಷಿತ (ಎನ್‌ಕ್ರಿಪ್ಟೆಡ್) ಕನೆಕ್ಷನ್ | ಪ್ರತಿ ರಾತ್ರಿ ಸುರಕ್ಷಿತ ಬ್ಯಾಕಪ್ | Excel ನಿಂದ ಡೇಟಾ ತರುವುದು ಮತ್ತು ತೆಗೆಯುವುದು

### GoldKhata ಟೀಮ್ ನನ್ನ ಲೆಕ್ಕ ಪತ್ರ ನೋಡಬಹುದಾ?

GoldKhata ದಲ್ಲಿ ಯಾರೂ ನಿಮ್ಮ ಲೆಕ್ಕ ಪತ್ರ ನೋಡುವುದಿಲ್ಲ. ನಿಮ್ಮ ಅಂಗಡಿಯ ದಾಖಲೆ ಪ್ರತ್ಯೇಕವಾಗಿ ಇಡಲಾಗುತ್ತೆ — ಬೇರೆ ಅಂಗಡಿಯ ಜೊತೆ ಎಂದೂ ಬೆರೆಯುವುದಿಲ್ಲ, ಎಂದೂ ಮಾರುವುದಿಲ್ಲ, ಯಾರಿಗೂ ಕೊಡುವುದಿಲ್ಲ. ಪ್ರತಿ ಕನೆಕ್ಷನ್ ಸುರಕ್ಷಿತ (ಎನ್‌ಕ್ರಿಪ್ಟೆಡ್), ನಿಮ್ಮ ಬ್ಯಾಕಪ್ ಕೂಡ. ಒಂದು ಅಂಗಡಿ ತಾನೇ ಸಹಾಯ ಕೇಳಿದಾಗ ಮಾತ್ರ ನಮ್ಮ ಟೀಮ್ ಅದರ ಡೇಟಾ ತೆರೆಯುತ್ತೆ — ಅದೂ ಸಮಸ್ಯೆ ಸರಿಪಡಿಸಲು ಎಷ್ಟು ಬೇಕೋ ಅಷ್ಟೇ. ಇದು ನಮ್ಮ ಪ್ರೈವಸಿ ಪಾಲಿಸಿಯಲ್ಲಿ ಬರೆದಿದೆ.

### ನಾನು ಹಣ ಕಟ್ಟುವುದು ನಿಲ್ಲಿಸಿದರೆ?

ಸಿಸ್ಟಮ್ ನೋಡಲು ಮಾತ್ರ ಸಿಗುತ್ತೆ. ಪ್ರತಿ ದಾಖಲೆ ಕಾಣುತ್ತಲೇ ಇರುತ್ತೆ, ಪೂರ್ತಿ Excel ಡೌನ್‌ಲೋಡ್ ಕೂಡ ನಡೆಯುತ್ತೆ. ಮತ್ತೆ ಪೇಮೆಂಟ್ ಮಾಡಿ, ಎಲ್ಲಾ ನಿಂತಲ್ಲಿಂದಲೇ ಶುರು.

### ಕೌಂಟರ್‌ನಲ್ಲಿ ಇಂಟರ್ನೆಟ್ ಹೋದರೆ?

ಫೋನ್ ಹಾಟ್‌ಸ್ಪಾಟ್ ಸಾಕು. ಲೈನ್ ಹೋದರೂ ನಿಮ್ಮ ದಾಖಲೆ ಆನ್‌ಲೈನ್‌ನಲ್ಲಿ ಸುರಕ್ಷಿತವಾಗಿರುತ್ತೆ, ಇಂಟರ್ನೆಟ್ ಇಲ್ಲದೆ ಮಾಡಿದ ಜ್ಯುವೆಲ್ಲರಿ ಬಿಲ್‌ಗಳು ಕನೆಕ್ಷನ್ ಬಂದ ತಕ್ಷಣ ತಾನಾಗೇ ಹೋಗುತ್ತೆ.

**ಮೊದಲ ದಿನ — ನಮಗೆ ವಾಟ್ಸ್‌ಆ್ಯಪ್ ಮಾಡಿ**
ನಿಮ್ಮಂಥ ಲೋನ್‌ಗಳ ಮೇಲೆ 15 ನಿಮಿಷದ ಡೆಮೊ

→

**ಎರಡು-ಮೂರನೇ ದಿನ — ನಿಮ್ಮ ಅಂಗಡಿಯಲ್ಲಿ ನಾವು ಸೆಟಪ್ ಮಾಡುತ್ತೇವೆ**
ಚಾಲ್ತಿ ಲೋನ್‌ಗಳು Excel ನಿಂದ, ನಿಮ್ಮ ಕಾಗದ ಪತ್ರ ರೆಡಿ, ನಿಮ್ಮ ಸ್ಟಾಫ್‌ಗೆ ಟ್ರೈನಿಂಗ್

→

**ಮೊದಲ ವಾರ — ಕೌಂಟರ್ ನೀವೇ ನಡೆಸುತ್ತೀರಿ**
ಸೆಟಪ್ ಮತ್ತು ಟ್ರೈನಿಂಗ್ ಫ್ರೀ; ಹೆಚ್ಚಿನ ಅಂಗಡಿಗಳು ಒಂದು ವಾರದಲ್ಲಿ ಶುರುವಾಗುತ್ತೆ

ಪ್ಲಾನ್

# ಸರಳ ಪ್ಲಾನ್‌ಗಳು, ಸೆಟಪ್ ಮತ್ತು ಟ್ರೈನಿಂಗ್ ಫ್ರೀ

## Starter

**₹499**/ತಿಂಗಳು

**₹4,999 ವರ್ಷಕ್ಕೆ**

ಒಂದೇ ಕೌಂಟರ್ ಇರುವ, ರಿಜಿಸ್ಟರ್ ಬಿಟ್ಟು ಸಾಫ್ಟ್‌ವೇರ್‌ಗೆ ಬರಬೇಕು ಅನ್ನುವ ಅಂಗಡಿಗೆ

- ✓ ಪೂರ್ತಿ ಲೋನ್ ಲೆಕ್ಕ: ಲೋನ್, ಗ್ರಾಹಕ, ಪೇಮೆಂಟ್
- ✓ ಬಡ್ಡಿ ನಿಮ್ಮದೇ ರೀತಿಯಲ್ಲಿ
- ✓ ಗಿರವಿ ಬಿಲ್, ರಿಜಿಸ್ಟರ್, ಡೆಲಿವರಿ ರಿಜಿಸ್ಟರ್, ನೋಟಿಸ್
- ✓ ಕ್ಯಾಶ್ ಬುಕ್, ದಿನದ ಲೆಕ್ಕ ಕ್ಲೋಸ್, ರಿಪೋರ್ಟ್
- ✓ Excel ನಿಂದ ಡೇಟಾ ತರುವುದು, ಒಂದೇ ಕ್ಲಿಕ್‌ನಲ್ಲಿ ಪೂರ್ತಿ ಡೇಟಾ ತೆಗೆಯುವುದು

## Pro

ಹೆಚ್ಚು ಜನರ ಆಯ್ಕೆ

**₹699**/ತಿಂಗಳು

**₹6,999 ವರ್ಷಕ್ಕೆ**

ಗ್ರಾಹಕರ ಜೊತೆ ವಾಟ್ಸ್‌ಆ್ಯಪ್‌ನಲ್ಲಿ ಇರಬೇಕು ಅನ್ನುವ ಅಂಗಡಿಗಳಿಗೆ

- ✓ Starter ನಲ್ಲಿರುವ ಎಲ್ಲಾ
- ✓ ವಾಟ್ಸ್‌ಆ್ಯಪ್ ನಿಮ್ಮದೇ ನಂಬರ್‌ನಿಂದ: ರಸೀದಿ, ರಿಮೈಂಡರ್, ಸ್ವಾಗತ ಮತ್ತು ಬಾಕಿ ಮೆಸೇಜ್
- ✓ ವಾಟ್ಸ್‌ಆ್ಯಪ್ ಇನ್‌ಬಾಕ್ಸ್ — ಮೆಸೇಜ್ ಬರುವುದೂ, ಹೋಗುವುದೂ
- ✓ ಚಿನ್ನದ ರೇಟ್ ದಿನಾ ತಾನಾಗೇ ಅಪ್‌ಡೇಟ್
- ✓ ಕನ್ನಡ ಮತ್ತು ತಮಿಳಿನಲ್ಲಿ ಕಾಗದ ಪತ್ರ ಮತ್ತು ಮೆಸೇಜ್

## Advanced

**₹999**/ತಿಂಗಳು

**₹9,999 ವರ್ಷಕ್ಕೆ**

ವ್ಯವಹಾರ ಬೆಳೆಸಬೇಕು, ಪೂರ್ತಿ ಕಂಟ್ರೋಲ್ ಬೇಕು ಅನ್ನುವ ಮಾಲೀಕರಿಗೆ

- ✓ Pro ನಲ್ಲಿರುವ ಎಲ್ಲಾ
- ✓ ಪ್ರತಿ ವಾರ ರೇಟ್ ಕಾರ್ಡ್, ಎಲ್ಲಾ ಗ್ರಾಹಕರಿಗೂ ಒಟ್ಟಿಗೆ ಮೆಸೇಜ್
- ✓ ಹಲವು ಬ್ರಾಂಚ್, ಒಂದೇ ಡ್ಯಾಶ್‌ಬೋರ್ಡ್
- ✓ ಜ್ಯುವೆಲ್ಲರಿ ಕೌಂಟರ್ — GST ಬಿಲ್ಲಿಂಗ್ ಮತ್ತು ಪೂರ್ತಿ ಲೆಕ್ಕ ಪತ್ರ
- ✓ ಮಾಲೀಕರ ಕಂಟ್ರೋಲ್ ರೂಮ್ ಮತ್ತು ಹರಾಜು ಕಮಾಂಡ್ ಸೆಂಟರ್
- ✓ ಎಲ್ಲರಿಗಿಂತ ಮೊದಲು ಸಪೋರ್ಟ್ — ನೇರವಾಗಿ ನಮ್ಮ ಜೊತೆ ಫೋನ್‌ನಲ್ಲಿ ಮಾತು

**ಗಮನಿಸಿ.** ಬೆಲೆ ಪ್ರತಿ ಅಂಗಡಿಗೆ, ಜೊತೆಗೆ 18% GST. ವರ್ಷದ ಹಣ ಒಟ್ಟಿಗೆ ಕಟ್ಟಿದರೆ ₹989 ರಿಂದ ₹1,989 ಉಳಿತಾಯ. ಪ್ರತಿ ಅಂಗಡಿಯೂ 30 ದಿನದ ಫ್ರೀ ಟ್ರಯಲ್‌ನಿಂದ ಶುರು ಮಾಡುತ್ತೆ — Advanced ನ ಎಲ್ಲಾ ಸೌಲಭ್ಯದೊಂದಿಗೆ, ಕಾರ್ಡ್ ಬೇಡ. ಸೆಟಪ್ — ಹಳೆ ರಿಜಿಸ್ಟರ್ ಡೇಟಾ ಹಾಕುವುದು ಮತ್ತು ಟ್ರೈನಿಂಗ್ — ಫ್ರೀ. ನಿಮ್ಮದೇ ವಾಟ್ಸ್‌ಆ್ಯಪ್ ನಂಬರ್ ಜೋಡಿಸಬೇಕಾದರೆ ಒಂದೇ ಸಲದ ₹1,999. ನಿಮ್ಮ ಅಂಗಡಿಗೆ ಸಣ್ಣ ಬದಲಾವಣೆ ಬೇಕಾದರೆ ಒಂದೇ ಸಲದ ₹999. ಪ್ರತಿ ಲೋನ್‌ಗೆ ಫೀಸ್ ಇಲ್ಲ, ಮೇಂಟೆನೆನ್ಸ್ ಚಾರ್ಜ್ ಇಲ್ಲ.

### ನಮಗೆ ವಾಟ್ಸ್‌ಆ್ಯಪ್ ಮಾಡಿ

**+91 88048 88883**

15 ನಿಮಿಷದ ಡೆಮೊ ತಗೊಳ್ಳಿ, ಅಥವಾ ಬಡ್ಡಿ ಪರೀಕ್ಷೆಗೆ ನಿಮ್ಮ ರಿಜಿಸ್ಟರ್‌ನ ಒಂದು ಪುಟದ ಫೋಟೋ ಕಳಿಸಿ.

### ಲೈವ್ ಡೆಮೊ ನೋಡಿ

**demo.goldkhata.com**

ಲಾಗಿನ್ **demo** / **demo1234**. ಒಂದು ಮಾದರಿ ಅಂಗಡಿ; ಪ್ರತಿ ರಾತ್ರಿ ಇದರ ಡೇಟಾ ತಾನಾಗೇ ಮೊದಲಿನಂತೆ ಆಗುತ್ತೆ.

### ನಿಮ್ಮ ಫ್ರೀ ಟ್ರಯಲ್ ಶುರು ಮಾಡಿ

**goldkhata.com/trial**

ಅದೇ ದಿನ ನಿಮ್ಮದೇ ಅಂಗಡಿ ಶುರು. 30 ದಿನ, ಎಲ್ಲಾ ಸೌಲಭ್ಯ, ಕಾರ್ಡ್ ಬೇಡ.

GoldKhata, Rank Pinnacle (ಕರ್ನಾಟಕ, ಭಾರತ) ಇದರ ಪ್ರಾಡಕ್ಟ್. ನಾವು ಸಾಫ್ಟ್‌ವೇರ್ ಕಂಪನಿ, ಲೋನ್ ಕೊಡುವವರಲ್ಲ. ಬೆಲೆಯಲ್ಲಿ GST ಸೇರಿಲ್ಲ, ಇವು ಸೆಪ್ಟೆಂಬರ್ 2026 ರ ಪ್ರಕಾರ ಸರಿ; ಈಗಿನ ಬೆಲೆ goldkhata.com/pricing ನಲ್ಲಿ ನೋಡಿ.